ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,ಅರಕಲಗೂಡು

**ಸಿ. ಸಿ. ನಂಃ 50/2018**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಜಯಮ್ಮ | **ದಿನಾಂಕ** | ಃ **18/01/2024** |
| ಗಂಡನ ಹೆಸರು | ಃ ರಮೇಶ ಶೆಟ್ಟಿ | ಸಿ ಡಬ್ಲ್ಯೂ | ಃ **01** |
| **ವಯಸ್ಸು** | ಃ **65** ವರ್ಷ | ಪಿ ಡಬ್ಲ್ಯೂ | ಃ **01** |
| **ಉದ್ಯೋಗ** | ಃ ಗೃಹಿಣಿ | | |
| **ವಿಳಾಸ** | ಃ ಬಿಟ್ಟಗೌಡನಹಳ್ಳಿ ಗ್ರಾಮ | | |

**ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಸಸಅ ರವರಿಂದ :-

ಚಾಸಾ 2 ನನ್ನ ಮಗ, ಚಾಸಾ 3 ನನ್ನ ಊರಿನವರು, ಚಾಸಾ 4 ನನ್ನ ಮಗ. ಆರೋಪಿ ನನ್ನ ಮಗ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಮೃತ ಕುಮಾರ ಅಲಿಯಾಸ್ ಪುಟ್ಟರಾಜ ನನ್ನ ಮಗ. ಅವನಿಗೆ ಹೇಗೆ ಅಪಘಾತವಾಯಿತು ಹಾಗೂ ಯಾರು ಅಪಘಾತಪಡಿಸಿದರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಮೃತ ಕುಮಾರನಿಗೆ ಅಪಘಾತವಾದ ಬಗ್ಗೆ ನನಗೆ ಯಾರೋ ಒಬ್ಬರು ಪೋನ್ ಮಾಡಿ ತಿಳಿಸಿದರು. ಆದರೆ ಹೇಗೆ ಅಪಘಾತ ಆಯಿತು ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟಿ ಸವಾಲು ಎಪಿಪಿಯವರಿಂದಃ**

ದಿನಾಂಕ 22.09.2017 ರಂದು ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ನನ್ನ ಮಕ್ಕಳಾದ ಆರೋಪಿ ಹಾಗೂ ಮೃತ ಕುಮಾರ ಇಬ್ಬರು ತಮ್ಮ ಬಾಬ್ತು ಕೆಎ-02 ಇಟಿ-8450 ಸ್ಪ್ಲೆಂಡರ್ ಪ್ಲಸ್ ಬೈಕಿನಲ್ಲಿ ನಮ್ಮ ಗ್ರಾಮದಿಂದ ಡೊಳ್ಳೇನಹಳ್ಳಿ ಗ್ರಾಮಕ್ಕೆ ಪಿತೃಪಕ್ಷದ ಹಬ್ಬಕ್ಕೆ ಹೋಗಿ ಊಟ ಮುಗಿಸಿಕೊಂಡು ವಾಪಸ್ ಬರುತ್ತಿದ್ದಾಗ ನನ್ನ ಮಗನಾದ ಆರೋಪಿ ಸದರಿ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದ ಎಂದರೆ ಸರಿಯಲ್ಲ. ಅದರ ಪರಿಣಾಮವಾಗಿ ನನ್ನ ಮಗ ಮೃತ ಕುಮಾರ ಹಾಗೂ ಆರೋಪಿಗೆ ತಲೆಗೆ ಹಾಗೂ ಮೈಕೈಗೆ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಮೃತ

ಪುಟ್ಟರಾಜನಿಗೆ ತಲೆಗೆ ಪೆಟ್ಟು ಬಿದ್ದು ರಕ್ತಸ್ರಾವವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಬೈಕ್ ಓಡಿಸುತ್ತಿದ್ದಾಗ ಎದುರಿನಿಂದ ಬಂದ ವಾಹನದ ಬೆಳಕು ಜಾಸ್ತಿ ಕಣ್ಣಿಗೆ ಬಿದ್ದ ಕಾರಣ ಬೈಕ್ ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತದ ವಿಚಾರವನ್ನು ಚಾಸಾ 4 ರವರಿಗೆ ಸ್ಥಳದಲಿಷ್ಟಿದ್ದ ಕೆಲವರು ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.ಆಗ ಚಾಸಾ 4 ರವರು ಯಾವುದೋ ಒಂದು ಖಾಸಗೀ ವಾಹನದಲ್ಲಿ ಆರೋಪಿ ಮತ್ತು ಮೃತ ಕುಮಾರನನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಎಸ್ ಎಸ್ ಎಂ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದರೆ ಸರಿ. ನನ್ನ ಮಗ ಮೃತ ಪುಟ್ಟರಾಜ ಅಲಿಯಾಸ್ ಕುಮಾರನಿಗೆ ಜ್ಞಾನ ತಪ್ಪಿದ್ದು ಆತನ ಸಾವಿ ಬದುಕಿನ ಮದ್ಯೆ ಹೋರಾಡುತ್ತಿದ್ದ ಕಾರಣ ನಾನು ತಡವಾಗಿ ದಿನಾಂಕ 23.09.2017 ರಂದು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಯು ಸಹ ನನ್ನ ಮಗನಾದ ಕಾರಣ ಆತನಿಗೆ ಸಹಾಯು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 24.09.2017 ರಂದು ಬೆಳಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಅಪಘಾತದ ನಡೆದ ಸ್ಥಳಕ್ಕೆ ಪೊಲೀಸರು ಬಂದು ನನ್ನ ಹಾಗೂ ಚಾಸಾ 2 ಮತ್ತು 3 ರವರ ಸಮಕ್ಷಮ ಕೃತ್ಯ ಸ್ಥಳ ಮಹಜರ್ ಹಾಗೂ ಅಮಾನತು ಮಹಜರ್ ಮಾಡಿ ಕೆಎ-02 ಇಟಿ-8450 ರ ಬೈಕನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಕಾಲದಲ್ಲಿ ನಾನು ಹಾಜರಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**